## ಕೊಳವೆ ಬಾವಿಗಳು

**113 (964); ಶ್ರೀ ಪಾಟೀಲ್ ಜೆ.ಟಿ (ಬೀಳಗಿ)**

ಅ) 2014–15ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಯಾವಾಗ ಬಿಡುಗಡೆ ಮಾಡಲಾಗುವುದು;

ಆ) 2013–14ನೇ ಸಾಲಿನಲ್ಲಿ ಮಂಜೂರಾದ ಕೊಳವೆಬಾವಿಗಳನ್ನು ಇದುವರೆವಿಗೂ ಕೊರೆಯದೆ ಇರುವುದಕ್ಕೆ ಕಾರಣವೇನು; ಎಷ್ಟು ದಿನಗಳಲ್ಲಿ ಕೊಳವೆಬಾವಿಗಳನ್ನು ಕೊರೆಸಲಾಗುವುದು?

**ಶ್ರೀ ಹೆಚ್. ಆಂಜನೇಯ (ಮಾನ್ಯ ಸಮಾಜ ಕಲ್ಯಾಣ ಹಾಗೂ ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು)**

ಅ) **ಡಾ॥ ಬಿ.ಆರ್.ಅಂಬೇಡ್ಕರ್ ಅಭಿವೃದ್ಧಿ ನಿಗಮಕ್ಕೆ** 2014–15ನೇ ಸಾಲಿನಲ್ಲಿ ₹ 387.40 ಕೋಟಿ ಅನುದಾನ ನಿಗಧಿಪಡಿಸಲಾಗಿದೆ. ಈ ಪೈಕಿ ಈವರೆಗೆ ವಿಶೇಷ ಕೇಂದ್ರೀಯ ನೆರವಿನ ಅನುದಾನವು ಸೇರಿದಂತೆ ₹ 230.24 ಕೋಟಿಗಳನ್ನು ಈ ನಿಗಮಕ್ಕೆ ಬಿಡುಗಡೆಯಾಗಿದೆ.
**ಕರ್ನಾಟಕ ಮಹರ್ಷಿ ವಾಲ್ಮೀಕಿ ಪರಿಶಿಷ್ಟ ಪಂಗಡಗಳ ಅಭಿವೃದ್ಧಿ ನಿಗಮಕ್ಕೆ** 2014–15 ನೇ ಸಾಲಿನ ಆಯವ್ಯಯದ ₹ 115.93 ಕೋಟಿಗಳು ನಿಗದಿಪಡಿಸಲಾಗಿದೆ. ಈ ಪೈಕಿ ಈವೆರೆಗೆ ₹ 55.50 ಕೋಟಿಗಳನ್ನು ಈ ನಿಗಮಕ್ಕೆ ಬಿಡುಗಡೆಯಾಗಿದೆ.

ಆ) 2013–14ನೇ ಸಾಲಿನ ಟೆಂಡರ್ ಪ್ರಕ್ರಿಯೆ ತಾಂತ್ರಿಕ, ಆಡಳಿತಾತ್ಮಕ ಮತ್ತು ನ್ಯಾಯಾಲಯದಲ್ಲಿ ಕಟ್ಟಳೆಗಳು, ಲೋಕಸಭಾ ಚುನಾವಣೆ ಸಂಬಂಧ ಜಾರಿಯಾದ ನೀತಿ ಸಂಹಿತೆ, ಮಳೆಗಾಲ, ಬೆಳೆಗಳು, ಅಂತರ್ಜಲ ಪ್ರಾಧಿಕಾರದಿಂದ ಬೆಂಗಳೂರು ಗ್ರಾಮಾಂತರ, ಬಳ್ಳಾರಿ, ಕೋಲಾರ ಮತ್ತು ಚಿಕ್ಕಬಳ್ಳಾಪುರ ಜಿಲ್ಲೆಗಳಲ್ಲಿ ಅನುಮತಿ ನೀಡಲು ತಡವಾಗಿರುವುದು ಇತ್ಯಾದಿ ಕಾರಣಗಳಿಂದ ಕೊಳವೆ ಬಾವಿಗಳನ್ನು ಕೊರೆಯಲು ವಿಳಂಬವಾಗಿರುತ್ತದೆ.

ಟೆಂಡರ್ ಕರೆಯುವ ಪ್ರಕ್ರಿಯೆ ಪ್ರಗತಿಯಲ್ಲಿದೆ. 2012–13 ಮತ್ತು 2013–14 ನೇ ಸಾಲಿನ ಬಾಕಿ ಗುರಿಯನ್ನು ಮೇ–2015ರೊಳಗೆ ಪೂರ್ಣಗೊಳಿಸಲಾಗುವುದು.

**ಶ್ರೀ ಜೆ.ಟಿ. ಪಾಟೀಲ್:** ಮಾನ್ಯ ಅಧ್ಯಕ್ಷರೆ, 2014–15ನೇ ಸಾಲಿನಲ್ಲಿ ಸಮಾಜಕಲ್ಯಾಣ ಇಲಾಖೆಯ ಅನುದಾನ ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಕೇಳಿದಾಗ ಕೇವಲ ನಿಗಮಗಳಿಗೆ ಕೊಟ್ಟಿದ್ದಂತಹ ಮಾಹಿತಿ ಕೊಟ್ಟಿದ್ದಾರೆ. 2014–15ನೇ ಸಾಲಿನಲ್ಲಿ ಅನೇಕ ಇಲಾಖೆಗಳ ಮುಖಾಂತರ SCP ಮತ್ತು TSP ಹಣವನ್ನು ಕ್ರೋಡೀಕರಿಸಿ ಅದನ್ನು ಬಿಡುಗಡೆ ಮಾಡಬೇಕಾಗಿತ್ತು, ಇದುವರೆಗೆ ಬಿಡುಗಡೆ ಮಾಡಿಲ್ಲ ಅದನ್ನು ಯಾವಾಗ ಬಿಡುಗಡೆ ಎಂದು ಮಾನ್ಯ ಮಂತ್ರಿಗಳಲ್ಲಿ ಕೇಳಿಕೊಳ್ಳುತ್ತೇನೆ.

**ಅಧ್ಯಕ್ಷರು:** ನೀವು ಕೊಳವೆ ಬಾವಿ ಬಗ್ಗೆ ಕೇಳಿದ್ದೀರಿ.

**ಶ್ರೀ ಜೆ.ಟಿ. ಪಾಟೀಲ್:** (ಅ) ದಲ್ಲಿ 2014–15ನೇ ಸಾಲಿನಲ್ಲಿ ಸಮಾಜ ಕಲ್ಯಾಣ ಇಲಾಖೆಯಿಂದ ಅನುದಾನ ಬಿಡುಗಡೆ ಮಾಡಲಾಗುವುದು ಎಂದು ಕೇಳಿದ್ದೇನೆ. .

**ಅಧ್ಯಕ್ಷರು:** ಬಿಡುಗಡೆ ಮಾಡಿದೆ ಎಂದು ಇದೆಯಲ್ಲ.

**ಶ್ರೀ ಜೆ.ಟಿ. ಪಾಟೀಲ್:** ನಿಗಮಗಳಿಗೆ ಅಷ್ಟೇ ಹೇಳಿದ್ದಾರೆ ಅವರು. SCP, TSP, Major Irrigation, Minor Irrigation, PWD ಎಲ್ಲಾ ಇಲಾಖೆಗಳ ಹಣ ಕ್ರೋಡೀಕರಿಸಿ ಆ ಇಲಾಖೆಗೆ ಕೊಡಲಾಗಿದೆ. ಅದನ್ನು ಯಾವಾಗ ಬಿಡುಗಡೆ ಮಾಡುತ್ತೀರಿ ಎಂದು ಅವರಿಗೆ ಪ್ರಶ್ನೆ ಕೇಳಿದ್ದೇನೆ.

**ಶ್ರೀ ಹೆಚ್. ಆಂಜನೇಯ:** ಮಾನ್ಯ ಅಧ್ಯಕ್ಷರೆ, ಈಗಾಗಲೇ ಹೊಸ ಕಾಯಿದೆ ಬಂದಿದೆ, SCP TSP ಒಂದು ಕಡೆಗೆ ಕ್ರೋಡಿಕರಿಸಿ ಅನುಷ್ಠಾನಗೊಳಿಸತಕ್ಕಂತಹ ಒಂದು ಕಾಯಿದೆಯನ್ನು ತಂದಿದ್ದೇವೆ. 32 ಇಲಾಖೆಗಳಿಗೆ ಬರತಕ್ಕಂತಹ SCP TSP ಹಣವನ್ನು ಆಯಾ ಇಲಾಖೆಗೆ ಬಿಡುಗಡೆ ಮಾಡಿ ಅವರು ಕಳುಹಿಸಿದಂತಹ ಯೋಜನೆಗಳಿಗೆ ಅಂಗೀಕಾರ

ನೀಡಿ ಅನುಷ್ಠಾನಕ್ಕೆ ನಾವು ಆದೇಶ ನೀಡಿದ್ದೇವೆ. ಮಾನ್ಯ ಮುಖ್ಯ ಮಂತ್ರಿಗಳ ಅಧ್ಯಕ್ಷತೆಯಲ್ಲಿ ಒಂದು ಉನ್ನತ ಸಮಿತಿ ಇದೆ, ಅದನ್ನು ಪರಿಶೀಲನೆ ಮಾಡುವಂತಹ Nodal Agency ಆಗಿ ಸಮಾಜ ಕಲ್ಯಾಣ ಇಲಾಖೆಯ ಮಂತ್ರಿಯಾಗಿ ನಾನು ನೋಡಿಕೊಳ್ಳುತ್ತಿದ್ದೇನೆ. ಈಗಾಗಲೇ ಲೋಕೋಪಯೋಗಿ ಇಲಾಖೆ ಮತ್ತು ಕೃಷಿ ಇಲಾಖೆ ಇರಬಹುದು, ನೀರಾವರಿ ಇಲಾಖೆ ಇರಬಹುದು, ಎಲ್ಲಾ ಇಲಾಖೆಗಳಿಗೂ ಹಣ ಬಿಡುಗಡೆ ಮಾಡಿದ್ದೇವೆ. ನೀವು ನಿಮಗೆ ಸಂಬಂಧಪಟ್ಟ ಇಲಾಖೆಯಿಂದ ಕೈಗೊಳ್ಳಬೇಕಾಗಿರತಕ್ಕಂತಹ SCP TSP ಕಾಮಗಾರಿಗಳನ್ನು ಕಾಂಕ್ರೀಟ್ ರಸ್ತೆ ಮತ್ತಿತರ ಸೌಕರ್ಯಗಳಿಗಾಗಿ ಲೋಕೋಪಯೋಗಿ ಇಲಾಖೆಯ ಇಂಜಿನಿಯರ್‌ಗಳನ್ನು ಸಂಪರ್ಕ ಮಾಡಿ ಹಣ ಬಿಡುಗಡೆ ಮಾಡಿದೆ, ಯೋಜನೆಗಳ ವಿವರಗಳನ್ನು ಕೊಟ್ಟು ಅದನ್ನು ಅಂಗೀಕರಿಸಿಕೊಂಡು ಕಾಮಗಾರಿಗಳನ್ನು ಪ್ರಾರಂಭ ಮಾಡಬಹುದು.

**ಶ್ರೀ ಜೆ.ಟಿ. ಪಾಟೀಲ್:** 2013–14ನೇ ಸಾಲಿನ ಕೊಳವೆ ಬಾವಿಗಳನ್ನು ಇದುವರೆಗೂ ಕೊರೆದಿಲ್ಲ. ಬಹಳ ತಡವಾಗಿದೆ, ಬೇಗನೆ ಅವುಗಳನ್ನು ಕೊರೆಯಬೇಕು.

**ಅಧ್ಯಕ್ಷರು:** ಅದರ ಮಧ್ಯದಲ್ಲಿ ನಾನು ಒಂದು ಸೇರಿಸಿ ಬಿಡುತ್ತೇನೆ. ಸುಮಾರು 40,000 ಕೊಳವೆ ಬಾವಿಗಳು ಇನ್ನೂ ಕೊರೆದಿಲ್ಲವೆಂದು ನೀವು ಒಂದು ಹೇಳಿಕೆ ನೀಡಿದ್ದನ್ನು ನಾನು ಓದಿದ್ದೆ. ಅದಕ್ಕೆ ನಾನು ಒಂದು ಪತ್ರ ಕೂಡ ನಿಮಗೆ ಬರೆದಿದ್ದೇನೆ. ಏನೆಂದರೆ, ನೀವು ರಾಜ್ಯಮಟ್ಟದಲ್ಲಿ ಟೆಂಡರ್ ಕರೆದು ಮಾಡುವುದಕ್ಕಿಂತ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ವಹಿಸಿ ಕೊಟ್ಟು ಮಾಡಿ ಎಂದು ಹೇಳಿದ್ದೆ.

**ಶ್ರೀ ಹೆಚ್. ಆಂಜನೇಯ:** ಹಿಂದೆ ಜಿಲ್ಲಾಧಿಕಾರಿಗಳ ಮಟ್ಟದಲ್ಲಿ ಈ ರೀತಿಯಾದ ಟೆಂಡರ್ ಕರೆದು ಕಾರ್ಯ ಆರಂಭ ಮಾಡಿದ್ದರೂ ಅದು ಸಕ್ಸಸ್ ಆಗಿಲ್ಲ. ಈಗ ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆಯುವುದಕ್ಕೆ ನಾವು ಎಲ್ಲಾ ಪ್ರಕ್ರಿಯ ಚಾಲನೆ ಮಾಡಿದ್ದೇವೆ. 2013–14, 2014–15 ಎರಡೂ ವರ್ಷದ್ದೂ ಸೇರಿಸಿ ಒಂದೇ ಸಾರಿ ಮುಂದಿನ ಮಾರ್ಚ್ ಏಪ್ರಿಲ್ ಒಳಗಾಗಿ ಇರತಕ್ಕಂತಹ

ಎಲ್ಲಾ ಬೋರ್‌ವೆಲ್‌ಗಳನ್ನು ಕೊರೆಯುವುದಕ್ಕೆ ಟೆಂಡರ್ ಕರೆದಿದ್ದೇವೆ. ಇದೇ ತಿಂಗಳು ಟೆಂಡರ್ ಡೇಟ್ ಮುಗಿಯುತ್ತಿದೆ. ಜನವರಿಯಿಂದ ಎಲ್ಲಾ ಕಡೆಗೆ ಬೋರ್‌ವೆಲ್ ಕೊರೆಸುವ ಕಾರ್ಯ ಪ್ರಾರಂಭ ಮಾಡುತ್ತೇವೆ.

**ಶ್ರೀ ಎಂ.ಟಿ. ಕೃಷ್ಣಪ್ಪ:** ಮಾನ್ಯ ಅಧ್ಯಕ್ಷರೆ, centralized ಟೆಂಡರ್ ಮಾಡುವುದರಿಂದ ವರ್ಷಗಟ್ಟಲೆ ಸಮಯ ತೆಗೆದುಕೊಳ್ಳುತ್ತದೆ. ಇದು ಬಹುಶಃ 2012–13 ಆಗಿಲ್ಲ 2014–15 ಆಗಿಲ್ಲ. ಹೀಗಾಗಿ ನಾವು ಸುಮ್ಮನೆ unnecessary MLA ಅಧ್ಯಕ್ಷತೆಯಲ್ಲಿ ಮಂಜೂರು ಮಾಡುತ್ತೇವೆ. ಮೂರು ಮೂರು ವರ್ಷಗಳಾದರೂ ಬೋರ್‌ವೆಲ್ ಕೊರೆಯುವುದಿಲ್ಲ.

**ಅಧ್ಯಕ್ಷರು:** ಈಗ ಏನು ಮಾಡಬೇಕೆಂದು ಹೇಳಿ.

**ಶ್ರೀ ಎಂ.ಟಿ. ಕೃಷ್ಣಪ್ಪ:** ಆಯಾ ಜಿಲ್ಲಾ ಮಟ್ಟದಲ್ಲಿ ಅಥವಾ ತಾಲ್ಲೂಕು ಮಟ್ಟದಲ್ಲಿ ಟೆಂಡರ್ ಕರೆಯುವ ಹಾಗೆ ಮಾಡಿ. ಇದಕ್ಕೆ centralization ಏಕೆ ಬೇಕು?

**ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ್:–** ಅದಕ್ಕಾಗಿಯೇ ಮೋಟಾರನ್ನು ಕೂಡ immediately ಕೂರಿಸಬೇಕು. ಇಲ್ಲದಿದ್ದರೆ ಬೋರ್‌ವೆಲ್ ಅನ್ನೇ ಕೊರೆಯುವುದಕ್ಕೆ ಒಂದು ವರ್ಷ ತೆಗೆದುಕೊಳ್ಳುತ್ತಾರೆ. ಜೆಸ್ಕಾಂನಿಂದ connection ಕೊಡಿಸುವುದುಕ್ಕೆ ಒಂದು ವರ್ಷ ತೆಗೆದುಕೊಳ್ಳುತ್ತಾರೆ. ಹೀಗಾಗಿ ಅ ಕೊಳವೆ ಬಾವಿಗಳು ಮುಚ್ಚಿಹೋಗುತ್ತಿವೆ.

**ಅಧ್ಯಕ್ಷರು:–** ಅದಕ್ಕಾಗಿ ಏನು ಮಾಡಬೇಕು ಎಂಬುದನ್ನು ಹೇಳಿ.

**ಶ್ರೀ ದತ್ತಾತ್ರೇಯ ಸಿ. ಪಾಟೀಲ್ ರೇವೂರ್:–** ಬೋರ್‌ವೆಲ್ ಕೊರೆದ ತಕ್ಷಣ ಮೋಟಾರ್ ಕೂಡಿಸಿ ವಿದ್ಯುತ್ ಸಂಪರ್ಕ ಕೊಡಿಸಬೇಕು.

**ಶ್ರೀ ಮಾಲೀಕಯ್ಯ ವಿ. ಗುತ್ತೇದಾರ್:–** ಮಾನ್ಯ ಅಧ್ಯಕ್ಷರೆ, ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆಯುವುದರಿಂದ ವಿಳಂಬವಾಗುತ್ತಿದೆ. ಮಾನ್ಯ ಮಂತ್ರಿಗಳು ಹೇಳಿದರು ಜಿಲ್ಲಾ ಮಟ್ಟದಲ್ಲಿ ಕರೆದರೆ ಯಾರೂ ಬರುತ್ತಿಲ್ಲವೆಂದರು. ಅದು ಸುಳ್ಳು. ಜಿಲ್ಲಾ ಮಟ್ಟದಲ್ಲಿ ಆದರೆ effective ಆಗಿ

ಆಗುತ್ತದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಟೆಂಡರ್ ಕರೆಯುವುದಕ್ಕೆ ತಾವು ಆದೇಶ ಕೊಡಬೇಕು.

**ಶ್ರೀ ದತ್ತಾತ್ರೇಯ ಸಿ ಪಾಟೀಲ್ ರೇವೂರ್:–** ಬೋರ್‌ವೆಲ್ ಕೊರೆದ ತಕ್ಷಣ ಅದಕ್ಕೆ ಮೋಟಾರ್ ಕೂಡಿಸಿ ವಿದ್ಯುತ್ ಸಂಪರ್ಕ ಕೊಡಿಸಬೇಕು.

**ಅಧ್ಯಕ್ಷರು:** ಮಾನ್ಯ ಸಚಿವರೆ ಉತ್ತರ ಹೇಳಿ.

**ಶ್ರೀ ಹೆಚ್. ಆಂಜನೇಯ (ಸಮಾಜ ಕಲ್ಯಾಣ ಸಚಿವರು):–** ಮಾನ್ಯ ಅಧ್ಯಕ್ಷರೆ, ಈ ಬಾರಿ ನಾವು ಟೆಂಡರ್‌ನ್ನು ಬಹಳ ಸರಳಗೊಳಿಸಿದ್ದೇವೆ. ಎಲ್ಲಾ ಜಿಲ್ಲೆಗಳಿಂದಲೂ ಕೂಡ ಈ ಟೆಂಡರ್‌ದಾರರು ಭಾಗವಹಿಸುತ್ತಾರೆ. ಎಲ್ಲಿ ಬೋರ್‌ವೆಲ್ ಕೊರೆಯುತ್ತಾರೋ ಅದಕ್ಕೆ ಜಿ.ಪಿ.ಎಸ್. ಕೂಡ ಅಳವಡಿಸಿದ್ದೇವೆ.

**ಅಧ್ಯಕ್ಷರು:–** ನಾನು ಒಂದು ಮಾತನ್ನು ಹೇಳುತ್ತೇನೆ ಕೇಳಿ. ಇಲ್ಲಿ ಕೊರೆಯುತ್ತಾರಲ್ಲ, ಕೆಲವು ಏರಿಯಾದಲ್ಲಿ ಮೇಲೆಯೇ ನೀರು ಸಿಗುತ್ತದೆ, ಕೆಲವು ಏರಿಯಾದಲ್ಲಿ ನೀರು ಬೇಗ ಸಿಗುವುದಿಲ್ಲ, ಉದಾಹರಣೆಗೆ ಕೋಲಾರ ಮತ್ತು ಇನ್ನಿತರ ಕೆಲವು ಕಡೆ. ಅವರು ಮೇಲೆಯೇ ಹೆಚ್ಚು ನೀರು ಬರುತ್ತದೋ ಅಲ್ಲಿ ಮೊದಲು ಬೋರ್‌ವೆಲ್ ಕೊರೆಯುತ್ತಾರೆ. ಆಳವಾಗಿ ಕೊರೆದರೂ ಎಲ್ಲಿ ನೀರು ಬರುವುದಿಲ್ಲವೆನ್ನುವುದು ಅವರಿಗೆ ಗೊತ್ತಾಗುತ್ತದೆ. ಅಂಥ ಕಡೆಗೆ ಅವರು ಹೋಗುವುದೇ ಇಲ್ಲ. ಅಂಥವೆಲ್ಲಾ ನಮ್ಮ ಜಿಲ್ಲೆಯ ಅನೇಕ ಕಡೆಗಳಲ್ಲಿದೆ. ಆದುದರಿಂದ ಅವರ ಬಗ್ಗೆ be careful.

**ಶ್ರೀ ಎಂ.ಟಿ. ಕೃಷ್ಣಪ್ಪ:–** ಮಾನ್ಯ ಅಧ್ಯಕ್ಷರೆ, M.I ನಲ್ಲಿ ಹೀಗೆ ಮಾಡುತ್ತಿದ್ದಾರೆ, M.I ನಲ್ಲಿ ಆಯಾಯ ಕ್ಷೇತ್ರಕ್ಕೆ ಕೊಟ್ಟಿದ್ದಾರೆ. ಆದರೆ ಇವರು ಏಕೆ ಈ ರೀತಿ ಇಟ್ಟುಕೊಳ್ಳಬೇಕು?

**ಶ್ರೀ ಗೋವಿಂದ ಎಂ. ಕಾರಜೋಳ:–** ಮಾನ್ಯ ಅಧ್ಯಕ್ಷರೆ, ಈ ಗಂಗಾ ಕಲ್ಯಾಣ ಯೋಜನೆಯಲ್ಲಿ "No water no money scheme" ಅನ್ನು ಏನು ತಂದಿದ್ದಾರೆ ಇದರಿಂದ ಬಹಳಷ್ಟು ಕಡೆ ಅನ್ಯಾಯವಾಗುತ್ತಿದೆ. ಎಲ್ಲಿ ನೀರು ಸಿಗುತ್ತದೋ ಅಲ್ಲಿಗೆ ಅವರು ಹೋಗಿ ಕೊರೆದು ಬಿಲ್ ತೆಗೆದುಕೊಂಡು

ಹೋಗಿಬಿಡುತ್ತಾರೆ. ಉಳಿದ ಕಡೆ ಕೆಲಸವಾಗುತ್ತಿಲ್ಲ. ಕಳೆದ ಎರಡು ವರ್ಷದಿಂದ ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆದು ಬೋರ್‌ವೆಲ್ ಕೊರೆಯುವುದಕ್ಕೆ agency fix ಮಾಡುತ್ತೇವೆಂದರು. ಇದುವರೆಗೂ ಆಗಲಿಲ್ಲ.

**ಅಧ್ಯಕ್ಷರು:–** ಅದಕ್ಕಾಗಿ ಏನು ಮಾಡಬೇಕು ಎಂದು ಸಲಹೆ ಕೊಡಿ.

**ಶ್ರೀ ಗೋವಿಂದ ಎಂ. ಕಾರಜೋಳ:–** ಅದಕ್ಕೆ ನಾನೇನು ಸಲಹೆ ಮಾಡುತ್ತೇನೆಂದರೆ, ಈ ಮೊದಲು ಜಿಲ್ಲಾಧಿಕಾರಿಗಳಿಗೆ ಅಧಿಕಾರವಿತ್ತು. ಆ ಜಿಲ್ಲಾಧಿಕಾರಿಗಳೇ tender final ಮಾಡಿಬಿಡುತ್ತಿದ್ದರು. ಆ ಮಟ್ಟದಲ್ಲಾದರೆ ಬೇಗ ಬೇಗ ಕೆಲಸವಾಗುತ್ತದೆ.

**ಶ್ರೀ ಜೆ.ಟಿ. ಪಾಟೀಲ್:–** ಮಾನ್ಯ ಅಧ್ಯಕ್ಷರೆ, ರಾಜ್ಯ ಮಟ್ಟದಲ್ಲಿ ಟೆಂಡರ್ ಕರೆದರೆ ಯಾರೋ ಒಬ್ಬಿಬ್ಬರು ಟೆಂಡರ್ ಹಿಡಿಯುತ್ತಾರೆ. ಟೆಂಡರ್ ಪ್ರಕ್ರಿಯೆ ಸಹಿತ ಮತ್ತು ಬೋರ್ ಕೊರೆಯುವ ಪ್ರಕ್ರಿಯೆ ಕೂಡ ತುಂಬಾ ವಿಳಂಬವಾಗುತ್ತದೆ. ಆದುದರಿಂದ ಜಿಲ್ಲಾ ಮಟ್ಟದಲ್ಲಿ ಜಿಲ್ಲಾಧಿಕಾರಿಗಳಿಗೆ ಅಧಿಕಾರ ಕೊಟ್ಟು ಜಿಲ್ಲಾ ಮಟ್ಟದಲ್ಲಿಯೇ ಟೆಂಡರ್ ಕರೆಯುವ ವ್ಯವಸ್ಥೆ ಮಾಡಬೇಕು.

**ಅಧ್ಯಕ್ಷರು:–** ಮಾನ್ಯ ಸಚಿವರೆ ಇನ್ನೊಂದು ಬಾರಿ examine ಮಾಡಿ.

**ಶ್ರೀ ಹೆಚ್. ಆಂಜನೇಯ:–** ಆಯಿತು ಮಾನ್ಯ ಅಧ್ಯಕ್ಷರೆ, ಎಷ್ಟು ತ್ವರಿತಗತಿಯಲ್ಲಿ ಅವರಿಗೆ ಅನುಕೂಲ ಮಾಡಿಕೊಡಬೇಕು ಎನ್ನತಕ್ಕಂಥ ಯೋಜನೆ ಇದಾಗಿದೆ. ಅವರ ಅನುಕೂಲಕ್ಕೆ ಏನು ಬೇಕೋ ಆ ಎಲ್ಲಾ ಕ್ರಮಗಳನ್ನು ತೆಗೆದುಕೊಳ್ಳುತ್ತೇವೆ.

**ಅಧ್ಯಕ್ಷರು:–** ನಾನು ನಿಮಗೆ ಸಲಹೆ ಏನು ಮಾಡುತ್ತೇನೆಂದರೆ ನಿಮ್ಮ ಎಂ.ಡಿ.ಗಳು ನಿಮಗೆ ಸರಿಯಾಗಿ brief ಮಾಡುವುದಿಲ್ಲ. ಅವರಿಗೆ ನೀವು ಸ್ವಲ್ಪ ಬರೆ ಹಾಕಬೇಕಾಗುತ್ತದೆ. ಯಾವ ಯಾವ ಜಿಲ್ಲೆಯಲ್ಲಿ ಈ ರೀತಿಯ ಅವ್ಯವಸ್ಥೆಯಾಗಿದೆ ಎಂಬುದನ್ನು ತಿಳಿದುಕೊಂಡು ನೀವು ದಯವಿಟ್ಟು ಬೇಗ

ಆಯಾಯ ವರ್ಷವೇ ಆ ಜನರಿಗೆ ಯೋಜನೆಯ ಪ್ರಯೋಜನ ಸಿಗಬೇಕು. ಅದಕ್ಕೆ ನೀವೇನಾದರೂ ಸೂಕ್ತ ಕಾರ್ಯಕ್ರಮ ರೂಪಿಸಿ.

**ಶ್ರೀ ಹೆಚ್. ಆಂಜನೇಯ:–** ಮಾನ್ಯ ಅಧ್ಯಕ್ಷರೆ, ತಮ್ಮ ಸಲಹೆಯಂತೆ ಮಾಡಲು ಕ್ರಮ ತೆಗೆದುಕೊಳ್ಳುತ್ತೇನೆ.

**ಅಧ್ಯಕ್ಷರು:–** ಓ.ಕೆ. ಮುಂದಿನ ಪ್ರಶ್ನೆ ವಸಂತ ಬಂಗೇರರವರದ್ದು ಇದೆ. ಈಗ ಅವರು ಸದನದಲ್ಲಿ ಇಲ್ಲ. ಮುಂದಿನ ಪ್ರಶ್ನೆ ಕೆ.ಆರ್.ರಮೇಶ್ ಕುಮಾರ್‌ರವರದ್ದು.

**ಕೋಲಾರ ಪ್ಯಾಕೇಜ್ ಸ್ಕೀಮ್**

**115 (2083); ಶ್ರೀ ರಮೇಶ್ ಕುಮಾರ್ ಕೆ.ಆರ್. (ಶ್ರೀನಿವಾಸಪುರ)**

ಅ) ಕೋಲಾರ ಜಿಲ್ಲೆಯಲ್ಲಿ ಪ್ಯಾಕೇಜ್ ಸ್ಕೀಮ್ ಅಡಿಯಲ್ಲಿ ಆರ್.ಟಿ.ಓ. ಇಲಾಖೆಗೆ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು;

ಆ) ಇದರಲ್ಲಿ ಓವರ್ ಲ್ಯಾಪಿಂಗ್ ಎಂದು (5 ಕಿ.ಮೀ. ಅಂತರದ) ಬಂದಿರುವ ಅರ್ಜಿಗಳಲ್ಲಿ ಎಷ್ಟನ್ನು ತಿರಸ್ಕರಿಸಲಾಗಿದೆ; (ಕಳೆದ 5 ವರ್ಷಗಳ ಮಾಹಿತಿ ಒದಗಿಸುವುದು);

ಇ) ಕೋಲಾರ ಜಿಲ್ಲೆಯೊಂದಿಗೆ ಪರವಾನಿಗೆ ಇಲ್ಲದೆ ಅನಧಿಕೃತವಾಗಿ ಪ್ಯಾಸೆಂಜರ್ ಗಾಡಿಗಳು ಸಂಚರಿಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಈ) ಹಾಗಿದ್ದಲ್ಲಿ, ಈ ಬಗ್ಗೆ ಸರ್ಕಾರ ಕೈಗೊಂಡಿರುವ ಕ್ರಮಗಳೇನು?

**ಶ್ರೀ ರಾಮಲಿಂಗಾರೆಡ್ಡಿ (ಮಾನ್ಯ ಸಾರಿಗೆ ಸಚಿವರು)**

ಅ) ಕಳೆದ 5 ವರ್ಷಗಳ ಅವಧಿಯಲ್ಲಿ ಸ್ವೀಕರಿಸಲಾದ ಅರ್ಜಿಗಳು :

| | |
|---|---|
| 1) ರಾಜ್ಯ ಸಾರಿಗೆ ಪ್ರಾಧಿಕಾರದಿಂದ | – 119 ಅರ್ಜಿಗಳು |
| 2) ಪ್ರಾದೇಶಿಕ ಸಾರಿಗೆ ಪ್ರಾಧಿಕಾರ ಕೋಲಾರದಿಂದ | – 77 ಅರ್ಜಿಗಳು |